ಅನುತ್ತೀರ್ಣಗೊಂಡ ಮಕ್ಕಳಿಗೆ ವಿಶೇಷ ತರಗತಿ, ಅದಕ್ಕೊಂದಷ್ಟು ದಾಖಲೆಗಳ ಸಿದ್ಧತೆಗೆ ಇಲಾಖಾ ಆದೇಶ. ಇದೀಗ ಈ ವ್ಯವಸ್ಥೆ ಎಲ್ಲಿಗೆ ಬಂದು ನಿಂತಿದೆಯೆಂದರೆ, 'ಅನುತ್ತೀರ್ಣಗೊಂಡ ಮಕ್ಕಳು ಏಕೆ ಉತ್ತೀರ್ಣಗೊಂಡಿಲ್ಲ ಎಂಬುದಕ್ಕೆ ಕಾರಣ ನೀಡಿ' ಎಂದು ಶಿಕ್ಷಕರಿಗೆ ನೋಟಿಸ್ ಜಾರಿಗೊಳಿಸುವವರೆಗೆ!

ಈಗ ನಮ್ಮ ಮುಂದಿರುವ ಪ್ರಶ್ನೆ ಅತ್ಯಂತ ಸರಳ. ಪ್ರತೀ ಬಾರಿ ಎಸ್.ಎಸ್.ಎಲ್.ಸಿ. ಮತ್ತು ಪಿ.ಯು.ಸಿ. ಪರೀಕ್ಷೆಗಳಲ್ಲಿ (ನಿರ್ದಿಷ್ಟವಾಗಿ ಎಸ್.ಎಸ್.ಎಲ್.ಸಿ. ಯಲ್ಲಿ) ಫಲಿತಾಂಶ ಕುಸಿತಕ್ಕೆ ಶಿಕ್ಷಕರನ್ನೇ ನೇರವಾಗಿ ಸಂಪೂರ್ಣ ಹೊಣೆಗಾರರನ್ನಾಗಿ ಏಕೆ ಮಾಡಲಾಗುತ್ತದೆ? ಈ ಮೂಲಕ ಇಲಾಖೆ ಅಥವಾ ಅಧಿಕಾರಿಗಳು ಶಿಕ್ಷಕರ ತೇಜೋವಧೆ ಮಾಡುವುದು ಎಷ್ಟು ಸರಿ? ಕುದುರೆ ನೀರು ಕುಡಿಯಬೇಕೆಂದರೆ ಅದನ್ನು ನೀರಿನ ಬಳಿ ಕರೆದುಕೊಂಡು ಹೋಗಬಹುದೇ ಹೊರತು, ಕುದುರೆಯ ಬದಲು ಕರೆದುಕೊಂಡು ಹೋದವರು ನೀರು ಕುಡಿಯಲಾಗದು. ಕನಿಷ್ಠ ನೀರನ್ನು ಕುಡಿಯುವ ಪ್ರಯತ್ನವನ್ನಾದರೂ ಕುದುರೆ ಮಾಡಲೇಬೇಕಾದ್ದು ಅನಿವಾರ್ಯ. ಹಾಗೆಯೇ ವಿದ್ಯಾರ್ಥಿಗಳ ಉತ್ತಮ ಕಲಿಕೆಗೆ ಶಕ್ತಿ ಮೀರಿ ಶಿಕ್ಷಕರು ಶ್ರಮಿಸುತ್ತಿದ್ದಾರೆ. ಆದರೆ ಅದಕ್ಕೆ ಪೂರಕ ಪ್ರಯತ್ನ ಮಕ್ಕಳಿಂದಲೂ ಆಗುತ್ತಿದೆಯೇ ಎನ್ನುವ ಪ್ರಶ್ನೆಗೆ ಉತ್ತರ ಹುಡುಕಲು ಯಾರೂ ತಯಾರಿಲ್ಲ. ನಮ್ಮ ಸಮಾಜಕ್ಕೆ ಈ ಪ್ರಶ್ನೆಯ ಕುರಿತು ಸದಾ ಒಂದು ರೀತಿಯ 'ಜಾಣ ಮರೆವು'.



ಚಿತ್ರ: ತಾಜುದ್ದೀನ್ ಆಜಾದ್

ಎಸ್.ಎಸ್.ಎಲ್.ಸಿ. ಅಂಕಪಟ್ಟಿ ಪಡೆಯಲು ಬರುವ ಪೋಷಕರು ಹೆಚ್ಚು ಅಂಕ ಬಂದ ವಿಷಯಗಳ ಶಿಕ್ಷಕರ ಬಳಿ ಹೋಗಿ ಒಂದು 'ಥ್ಯಾಂಕ್ಸ್' ಹೇಳಲು ಮನಸ್ಸು ಮಾಡಲಾರರು. ಆದರೆ ಕಡಿಮೆ ಅಂಕ ಬಂದ ವಿಷಯ ಶಿಕ್ಷಕರ ಬಳಿ ಹೋಗಿ 'ಯಾಕೋ ನಿಮ್ಮ ಸಬ್ಜೆಕ್ಟಿನಲ್ಲಿ ಮಾರ್ಕ್ಸ್ ಕಡಿಮೆ ಆಯ್ತುಲ್ಲಾ ಸರ್' ಎಂದು ಅವರನ್ನು ಅಪರಾಧಿ ಸ್ಥಾನದಲ್ಲಿ ನಿಲ್ಲಿಸಿ ಬಿಡುತ್ತಾರೆ. ಸರ್ಕಾರಿ ಶಾಲೆಯಲ್ಲಿ ಓದುವ ಮಕ್ಕಳು ಟ್ಯೂಶನ್‌ಗಳಿಗೆ ಹೋದರೆ, ಯಶಸ್ಸಿನ ಕ್ರೆಡಿಟ್ ಟ್ಯೂಶನ್ ಕೇಂದ್ರಗಳಿಗೆ ಸಂದಾಯವಾಗುತ್ತದೆ. ಅದೇ ರೀತಿ ಅಲ್ಲಿಯೇ ಮನೆ ಪಾಠಕ್ಕೆ ಹೋಗುವ ಮಗು ಖಾಸಗೀ ಶಾಲೆಯಲ್ಲಿದ್ದರೆ ಅದರ ಕ್ರೆಡಿಟ್ ಖಾಸಗಿ ಶಾಲೆಗೆ. ಅಂದರೆ ನೆನಪಿರಲಿ– ಇವೆಲ್ಲವೂ ನಡೆಯುವುದು ಸರ್ಕಾರಿ ಶಾಲೆಗಳಲ್ಲಿ ಮಾತ್ರ.

ಉನ್ನತ ಸ್ಥಾನದಲ್ಲಿ ಉತ್ತೀರ್ಣರಾದ ಖಾಸಗಿ ಶಾಲೆಯ ಮಕ್ಕಳ ಫಲಿತಾಂಶ ನೋಡಿದಾಗ ಸಮಾಜವೂ ಆ ಶಾಲೆಯನ್ನು ಪ್ರಶಂಸಿಸುತ್ತದೆ. ಅದೇ ಸರ್ಕಾರಿ ಶಾಲೆಯ ಮಕ್ಕಳು ಉನ್ನತ ದರ್ಜೆಯಲ್ಲಿ ಉತ್ತೀರ್ಣರಾದರೆ ಅದರ ಕ್ರೆಡಿಟ್ ಮಕ್ಕಳಿಗೆ ಮಾತ್ರ, ಶಾಲೆಗಲ್ಲ. 'ಸರ್ಕಾರಿ ಶಾಲೆಗೆ ಸೇರಿ ಓದಿ ಎಷ್ಟು ಚೆನ್ನಾಗಿ ಅಂಕ ತೆಗೆದಿದ್ದಾರೆ, ನೋಡಿ' ಎಂಬ ವಿಶೇಷ ಹೆಗ್ಗಳಿಕೆ ಆ ವಿದ್ಯಾರ್ಥಿಗೆ. ಶಾಲೆ ಮತ್ತು ಶಿಕ್ಷಕರು ಇಲ್ಲಿ ನಗಣ್ಯ. ಇದರರ್ಥ ಸರ್ಕಾರಿ ಶಾಲೆಯಲ್ಲಿ ಎಲ್ಲವೂ ಕಳಪೆ, ಅದರ ನಡುವೆ ನಮ್ಮ ಮಕ್ಕಳು ಗೆದ್ದರು ಎನ್ನುವ ಭಾವ. ಆದರೆ ಇಲ್ಲಿ ಮಕ್ಕಳು ಬದುಕಿನ ಪಾಠವನ್ನು ಕಲಿತಿರುತ್ತಾರೆ ಎಂಬುದು ಬಹಳ ತಡವಾಗಿ ತಿಳಿಯುತ್ತದೆ.

ಖಾಸಗಿ ಶಾಲೆಗಳಲ್ಲಿ ಡಿಜಿಟಲ್ ಕ್ಲಾಸ್, ಸ್ಮಾರ್ಟ್ ಕ್ಲಾಸ್‌ಗಳ ಆರ್ಭಟ. ಆಕರ್ಷಕ ಡ್ರೆಸ್‌ಕೋಡ್, ಬಸ್‌ಗಳ ವ್ಯವಸ್ಥೆ, ವಿಷಯವಾರು ಶಿಕ್ಷಕರು (ಕಂಪ್ಯೂಟರ್ ಸಹ ಸೇರಿದಂತೆ), ಆಧುನಿಕತೆಯ ಸ್ಪರ್ಶ ಹೊಂದಿರುವ ಕಟ್ಟಡ ವಿನ್ಯಾಸ. ಇವೆಲ್ಲದರಿಂದ ಪೋಷಕರು ಸಹಜವಾಗಿ ಮನಸೋಲುತ್ತಾರೆ. ನೆನಪಿರಲಿ– ಇಂತಹ ಯಾವುದೇ ಶಾಲೆಗಳಲ್ಲಿ ಸಾಧಾರಣ ಬುದ್ಧಿವಂತಿಕೆಗಿಂತ ಕೆಳಮಟ್ಟದ ವಿದ್ಯಾರ್ಥಿಗಳಿಗೆ ಪ್ರವೇಶವಿರುವುದಿಲ್ಲ. ಓದುವ ಮಕ್ಕಳಲ್ಲಿ ಶೇ. 90ರಷ್ಟು ಮಕ್ಕಳು ಖಾಸಗಿ ಶಾಲೆಗಳ ಪಾಲು. ಉಳಿದ ಶೇ.10ರಷ್ಟು ಮಕ್ಕಳು ಹಾಗೂ ಕಲಿಕೆಯಲ್ಲಿ ಹಿಂದುಳಿದ ಮಕ್ಕಳು, ಅಷ್ಟೇ ಏಕೆ ಗ್ರಾಮೀಣ ಪ್ರದೇಶಗಳಲ್ಲಿ ಸಮಸ್ಯಾತ್ಮಕ ಮಕ್ಕಳು, ಖಾಸಗಿ ಶಾಲೆಯಲ್ಲಿ ಮತ್ತು ಅನುತ್ತೀರ್ಣರಾಗಿ ತಿರಸ್ಕೃತಗೊಂಡ ಮಕ್ಕಳು– ಎಲ್ಲರೂ ಸರ್ಕಾರಿ ಶಾಲೆ ಮತ್ತು ಕಾಲೇಜುಗಳ ಪಾಲಿಗೆ ಸಿಗುತ್ತಾರೆ. ಹೀಗಿದ್ದರೂ ಇದನ್ನು ಸವಾಲಾಗಿ ಸ್ವೀಕರಿಸಿರುವ ಶಿಕ್ಷಕ ವೃಂದ ಯಾವುದೇ ಸಮಸ್ಯೆಗಳನ್ನು ನೆಪ ಹೇಳಿ ಹಿಮ್ಮೆಟ್ಟಿಸಿಲ್ಲ. ಇರುವ ವ್ಯವಸ್ಥೆಯಲ್ಲೇ ಮಾಹಿತಿ ತಂತ್ರಜ್ಞಾನದ ಬಳಕೆ, ಮಕ್ಕಳಿಂದ ನಿರಂತರ ಕಲಿಕೆ ಪ್ರಯತ್ನ ಮಾಡಿಸಿ ಮುನ್ನುಗ್ಗುವ ಪ್ರಯತ್ನದಲ್ಲಿದ್ದಾರೆ ಅಲ್ಲಿನ ಶಿಕ್ಷಕರು.

ಬುದ್ಧಿವಂತರನ್ನು ಆಯ್ಕೆ ಮಾಡಿಕೊಂಡು ಶೇ.100ರ ಫಲಿತಾಂಶ ಪಡೆಯುವ ಶಾಲೆಗಳ ನಡುವೆ, ಸಾಧಾರಣ ಮತ್ತು ಕಲಿಕೆಯಲ್ಲಿ ಹಿಂದುಳಿದ ಮಕ್ಕಳ ತಂಡದೊಂದಿಗೆ ಶೇ.50ರಿಂದ 60 ಫಲಿತಾಂಶ ನೀಡುವ ಶಾಲೆಗಳು ಹೆಚ್ಚು ಗೌರವಕ್ಕೆ ಪಾತ್ರವಾಗುತ್ತವೆ ಎನ್ನುವುದು ನನ್ನ ಸ್ಪಷ್ಟ ಅನಿಸಿಕೆ.

ಇನ್ನು ಸರ್ಕಾರಿ ಶಾಲೆಯ ಹೊರನೋಟ ನೋಡುವುದಾದರೆ ಅಲ್ಲಿ ಕಟ್ಟಡಗಳಿಗೆ ಬಣ್ಣವಿರುತ್ತದೆ, ಆದರೆ ಆಕರ್ಷಕವಾಗಿರುವುದಿಲ್ಲ. ಇದು ಸರ್ಕಾರಿ ಶಾಲೆ ಎಂದು ಗುರುತಿಸಬಹುದಾದ ಅದೇ ನಿರ್ದಿಷ್ಟ ಬಣ್ಣಗಳು. ಪ್ರತೀ ವರ್ಷ ಬದಲಾದ ವಿನ್ಯಾಸದಲ್ಲಿ, ಬದಲಾದ ಬಣ್ಣಗಳಲ್ಲಿ ಬರುವ ಸಮವಸ್ತ್ರಗಳು. ಬಿಗಿಯಾಗಿ ಶಿಸ್ತು ಜಾರಿಗೆ ತರಲು ತೊಡಕಾಗುವ ಮತ್ತು ಶಿಕ್ಷಕರ ಮೇಲೆ ಪೋಷಕರಿಗೆ ಅಗೌರವ ಮೂಡಿಸುವ ಅರ್ಥಹೀನ ಕಾನೂನುಗಳು. ಸಾಮಾನ್ಯವಾಗಿ ಸಮಾಜದ ಬಹುತೇಕ ಜನರಿಗೆ ಸುಲಭವಾಗಿ, ಅಗ್ಗವಾಗಿ ಸಿಗುವ ಯಾವ ವಸ್ತುಗಳ ಬಗ್ಗೆಯೂ ಗೌರವಕ್ಕಿಂತ ಅನಾದರವೇ ಹೆಚ್ಚು. ಉದಾಹರಣೆಗೆ ಆದರ್ಶ ಮೆರೆಯಲು ಹೊರಟ ಹುಡುಗ ವರದಕ್ಷಿಣೆಯಿಲ್ಲದೆ ವಿವಾಹವಾಗುವೆ ಎಂದರೆ, ಆತನಲ್ಲೇನೋ ಕೊರತೆ ಇರಬೇಕು ಎಂದು ಅನುಮಾನಿಸುತ್ತದೆ ಒಂದು ವರ್ಗ. ಹಾಗೆಯೇ ಸರ್ಕಾರಿ ಶಾಲೆಗಳ ಉಚಿತ ವ್ಯವಸ್ಥೆಗಳನ್ನು ಶಾಲೆಗಳ ಗುಣಾತ್ಮಕತೆಯೊಂದಿಗೆ ಹೋಲಿಸಿ ನೋಡುವ ಪರಿಪಾಟ ಬೆಳೆದು ನಿಂತಿದೆ. ಆದರೆ ಈ ಯಾವುದೇ ಸೂಕ್ಷ್ಮಗಳನ್ನು ಗಮನಿಸದ ಸಮಾಜ ಮತ್ತು ಇಲಾಖೆ ಎಲ್ಲದಕ್ಕೂ ಬೋಧಕ ವರ್ಗವನ್ನೇ ಹೊಣೆ ಮಾಡುತ್ತಿರುವುದು ಎಷ್ಟು ಸರಿ?

ಇತ್ತೀಚಿನ ವರ್ಷಗಳಲ್ಲಿ ಸರ್ಕಾರಿ ಶಾಲೆಗಳಿಗೆ ಉನ್ನತ ಪದವಿಗಳನ್ನು ಪಡೆದ ಪ್ರತಿಭಾನ್ವಿತ ಯುವ ಉತ್ಸಾಹಿ ಶಿಕ್ಷಕರು ಹೆಚ್ಚಾಗಿ ಸೇರ್ಪಡೆಯಾಗುತ್ತಿದ್ದಾರೆ. ಬಹಳಷ್ಟು ಶಿಕ್ಷಕರು ತಮ್ಮ ಸತತ ಪರಿಶ್ರಮದಿಂದ ಮಕ್ಕಳ ಕಡಿಮೆ ಬುದ್ಧಿಮಟ್ಟವನ್ನು ಹೆಚ್ಚಿಸುವ ಕೆಲಸವನ್ನು ಸವಾಲಾಗಿ ಸ್ವೀಕರಿಸಿದ್ದಾರೆ. ಹೀಗಿರುವಾಗ ಇಂತಹ ಯುವ ಪೀಳಿಗೆಯ ಬುದ್ಧಿವಂತಿಕೆಯ ಸೂಕ್ತ ಬಳಕೆಗೆ ಸಮುದಾಯ ಮತ್ತು ಇಲಾಖೆ ಪ್ರೋತ್ಸಾಹ ನೀಡಬೇಕೇ ಹೊರತು, ಎಲ್ಲದಕ್ಕೂ ದಾಖಲೀಕರಣ ಮಾಡಿಸುತ್ತಾ ಅವರ ಬೋಧನಾ ಸ್ವಾತಂತ್ರ್ಯ, ಸಾಮರ್ಥ್ಯಗಳಿಗೆ ಕಡಿವಾಣ ಹಾಕಬಾರದು. ಪರಿಸ್ಥಿತಿ ಹೀಗೆಯೇ ಮುಂದುವರಿದರೆ ಉತ್ತಮ ಶಿಕ್ಷಕರು ಶಿಕ್ಷಕ ವೃತ್ತಿಯತ್ತ ಮುಖ ಮಾಡದೆ ಇತರ ಕ್ಷೇತ್ರಗಳತ್ತ ವಲಸೆ ಹೋಗಬಹುದು. ಶಿಕ್ಷಣ ಖಾಸಗೀಕರಣ ಆಗುವ ಭರದಲ್ಲಿ ಶ್ರಮಿತ– ಯೋಜಿತ– ಶಿಕ್ಷಕರು ಈ ಇಲಾಖೆಯಿಂದ ಕಾಣೆಯಾದರೂ ಅಚ್ಚರಿಯಿಲ್ಲ. ಶಿಕ್ಷಕರನ್ನು ಹೊಗಳಿ ಹೊನ್ನ ಶೂಲಕ್ಕೇರಿಸುವುದೂ ಬೇಡ. ಎಲ್ಲದಕ್ಕೂ ಅವರತ್ತ ಬೆರಳು ಮಾಡಿ ಬೆಲೆಯಿಲ್ಲದಂತೆ ನಡೆಸಿಕೊಳ್ಳುವುದೂ ಬೇಡ. ಆಯಾ ಸಂದರ್ಭಕ್ಕೆ ತಕ್ಕಂತೆ ಅವರ ಸಾಮರ್ಥ್ಯವನ್ನು ಗುರುತಿಸಿ, ಅವರ ಸಾಧನೆಗೆ ತಕ್ಕ ಶ್ಲಾಘನೆ ಮಾಡುವುದನ್ನು ಕಲಿಯಿರಿ. ಅವರ ಶ್ರಮ ನಿಜಕ್ಕೂ ಇದೆಯೆಂದಾದರೆ, ಅದರ ಯಶಸ್ಸಿನ ಪಾಲನ್ನು ಅವರೇ ಪಡೆದುಕೊಳ್ಳಲಿ.